ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯ,

ನಂ:4,100, ಅಡಿ ರಿಂಗ್ ರಸ್ತೆ, ಹೊಸಕೆರೆಹಳ್ಳಿ, ಬನಶಂಕರಿ 3 ನೇ ಹಂತ, ಬೆಂಗಳೂರು-85.

ಸಂಖ್ಯೆ :- ಶಿತ2 ಪೂ.ಪ್ರಾ..ವೇ.ಪಟ್ಟಿ02 /11-12 ದಿನಾಂಕ: 22-10-2011

**ಸುತ್ತೋಲೆ**

ವಿಷಯ: 2011-12ನೇ ಸಾಲಿನ ಪೂರ್ವ ಪ್ರಾಥಮಿಕ ಶಿಕ್ಷಕರ ತರಬೇತಿಯ ಶೈಕ್ಷಣಿಕ ವೇಳಾಪಟ್ಟಿಯನ್ನು ನಿಗದಿಪಡಿಸುವ ಕುರಿತು.

ಉಲ್ಲೇಖ: 1. ಸರ್ಕಾರದ ಪತ್ರ ಸಂಖ್ಯೆ ಇಡಿ 29 ಪಿಟಿಐ 2011 ದಿನಾಕ 12-10-2011.

2. ಎನ್.ಸಿ.ಟಿ.ಇ ಆಕ್ಟ್ ರೂಲ್ಸ್ ಅಂಡ್ ರೆಗ್ಯುಲೇಷನ್ ದಿನಾಂಕ 31-03-2007.

ಉಲ್ಲೇಖ-1ರ ಸರ್ಕಾರದ ಆದೇಶದಲ್ಲಿ ಪೂರ್ವ ಪ್ರಾಥಮಿಕ ಶಿಕ್ಷಕರ ತರಬೇತಿಯನ್ನು ಹಿಂದಿನ ಸಾಲಿನಂತೆಯೇ ಶೈಕ್ಷಣಿಕ ಅವಧಿ ಮತ್ತು ಅರ್ಹತೆಯನ್ನು ಮುಂದಿನ ಒಂದು ವರ್ಷದ ಅವಧಿಗೆ ಮುಂದುವರೆಸಲು ಆದೇಶವಾಗಿರುತ್ತದೆ.

2011-12ನೇ ಸಾಲಿಗೆ ಅನ್ವಯವಾಗುವಂತೆ ಆಡಳಿತ ಮಂಡಳಿ ಕೋಟಾ ದಾಖಲಾತಿಗಳೂ ಸೇರಿದಂತೆ ವಾರ್ಷಿಕ ಶೈಕ್ಷಣಿಕ ವೇಳಾ ಪಟ್ಟಿಯನ್ನು ಈ ಕೆಳಗೆ ಸೂಚಿಸಿರುವಂತೆ ನಿಗದಿಪಡಿಸಲಾಗಿದೆ. ಈ ವೇಳಾ ಪಟ್ಟಿಯನ್ನು ಎಲ್ಲಾ ಪೂರ್ವ ಪ್ರಾಥಮಿಕ ಶಿಕ್ಷಕರ ತರಬೇತಿ ಸಂಸ್ಥೆಗಳೂ ಕಡ್ಡಾಯವಾಗಿ ಪಾಲಿಸುವುದರ ಜೊತೆಗೆ ಜಾರಿಯಲ್ಲಿರುವ ಎಲ್ಲಾ ಶೈಕ್ಷಣಿಕ ಹಾಗೂ ಆಡಳಿತಾತ್ಮಕ ನಿಯಮಗಳನ್ನು ಪಾಲಿಸಲು ಸೂಚಿಸಲಾಗಿದೆ. ಡಯಟ್ ಪ್ರಾಂಶುಪಾಲರುಗಳು ಶೈಕ್ಷಣಿಕ ವೇಳಾಪಟ್ಟಿಯನ್ನು ಗಮನಿಸಿ ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿನ ಪೂರ್ವ ಪ್ರಾಥಮಿಕ ಶಿಕ್ಷಕರ ತರಬೇತಿ ಸಂಸ್ಥೆಗಳ ವಿದ್ಯಾರ್ಥಿಗಳ ದಾಖಲಾತಿ ಅನುಮೋದನೆ ಸಂಬಂಧ ನಿಯಮಾನುಸಾರ ಪರಿಶೀಲಿಸಿ ಸೂಕ್ತ ಕ್ರಮಗಳನ್ನು ಕೈಗೊಳ್ಳತಕ್ಕದ್ದು. ದಾಖಲಾತಿಗಳಿಗೆ ಸಂಬಂಧಿಸಿದಂತೆ ಹಿಂದಿನ ಸಾಲಿನಂತೆಯೇ ಎಲ್ಲಾ ಸಾಮಾನ್ಯ ಸೂಚನೆಗಳು ಮುಂದುವರೆಯುತ್ತದೆ ಎಂಬುದನ್ನು ಗಮನಿಸುವುದು.

ಎನ್.ಸಿ.ಟಿ.ಇ ಪ್ರಾಧಿಕಾರದಿಂದ ಅಧಿಕೃತವಾಗಿ ಮಾನ್ಯತೆಯನ್ನು, ಪ್ರಸ್ತುತ ಸಾಲಿಗೆ ಮಾನ್ಯತೆಯ ನವೀಕರಣವು ಕಡ್ಡಾಯವಾಗಿದ್ದು, ಆದೇಶ ರಹಿತವಾಗಿ ಯಾವುದೇ ದಾಖಲಾತಿಗಳನ್ನು ಸಂಸ್ಥೆಗಳು ಮಾಡಿಕೊಳ್ಳತಕ್ಕುದ್ದಲ್ಲ. ಎನ್.ಸಿ.ಟಿ.ಇ ಮಾನ್ಯತೆ ರಹಿತವಾಗಿ ಅರ್ಜಿಯನ್ನು ಆಹ್ವಾನಿಸುವಂತಹ ಯಾವುದೇ ಪೂರ್ವ ಪ್ರಾಥಮಿಕ ಶಿಕ್ಷಕರ ತರಬೇತಿ ಸಂಸ್ಥೆಯ ವಿರುದ್ಧ ನಿಯಮಾನುಸಾರ ಡಯಟ್ ಪ್ರಾಂಶುಪಾಲರು ಕ್ರಮಗಳನ್ನು ಕೈಗೊಳ್ಳಲು ತಿಳಿಸಿದೆ. ಮಾನ್ಯತೆ ರಹಿತವಾಗಿ ಅನದಿಕೃತ ದಾಖಲಾತಿಗಳನ್ನು ಮಾಡಿಕೊಳ್ಳುವಂತಹ ಸಂಸ್ಥೆಯ ವಿರುದ್ಧ ಕರ್ನಾಟಕ ಮಾನ್ಯತೆ ಪಡೆಯದ ಮತ್ತು ಸಂಯೋಜಿತವಾಗಿಲ್ಲದ ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶ ನಿಷೇಧ ಅಧಿನಿಯಮ 92ರಡಿಯಲ್ಲಿ ಪ್ರಸ್ತಾಪಿತ

ದಂಡನೆಗಳನ್ನು ಕೋರಿ ತಮ್ಮ ವ್ಯಾಪ್ತಿಯ ನ್ಯಾಯಾಲಯದಲ್ಲಿ ಪ್ರಕರಣಗಳನ್ನು ದಾಖಲಿಸಿ ಈ ಕಛೇರಿಗೆ ವರದಿ ನೀಡುವುದು.

ಉಲ್ಲೇಖ-3 ಎನ್ ಸಿ ಟಿ ಇ ನಿಯಮಗಳಂತೆ ಪೂರ್ವ ಪ್ರಾಥಮಿಕ ಶಿಕ್ಷಕರ ತರಬೇತಿಗೆ ದಾಖಲಾತಿಗೆ ವಿದ್ಯಾರ್ಥಿಗಳ ಕನಿಷ್ಠ ವಿದ್ಯಾರ್ಹತೆಯನ್ನು ಪಿಯುಸಿ (12ನೇ ತರಗತಿ) ಯನ್ನು ಕಡ್ಡಾಯವಾಗಿ ಪರಿಗಣಿಸಲು ತಿಳಿಸಿದೆ.

**ಪೂರ್ವ ಪ್ರಾಥಮಿಕ ಶಿಕ್ಷಕರ ತರಬೇತಿ**

**2011-12ನೇ ಸಾಲಿನ ದಾಖಲಾತಿ ಪ್ರಕ್ರಿಯೆ ಹಾಗೂ ಶೈಕ್ಷಣಿಕ ಚಟುವಟಿಕೆಗಳ ಪ್ರಾರಂಭ**

**ದಿನಾಂಕ :02-11-2011 ರಿಂದ 20-06-2012 ರ ವರೆಗೆ**

| | | |
|---|---|---|
| ವಿದ್ಯಾರ್ಥಿಗಳ ದಾಖಲಾತಿ ಅನುಮೋದನೆ ಪ್ರಸ್ತಾವನೆಯನ್ನು ಸಂಬಂದಿಸಿದ ಡಯಟ್‌ಗಳಿಗೆ ಸಲ್ಲಿಸಲು ಕೊನೆಯ ದಿನಾಂಕ | 15-11-2011 | |
| ತರಗತಿಯ ಪ್ರಾರಂಭ | 02-11-2011 | |
| ಪ್ರಥಮ ಅವಧಿ | 02-11-2011 ರಿಂದ 25-12-2011 | 48 |
| ಮಧ್ಯಂತರ ರಜಾ ಅವಧಿ | 26-12-2011 ರಿಂದ 31-12-2011 | |
| ಎರಡನೆಯ ಅವಧಿ | 01-01-2012 ರಿಂದ 20-06-2012 | 134 |
| ವಾರ್ಷಿಕ ಪರೀಕ್ಷೆ | 2012ನೇ ಜೂನ್ ಕಡೆಯವಾರ | 182 |

ನಿರ್ದೇಶಕರು,
ಶಿಕ್ಷಣ ಸಂಶೋಧನೆ ಮತ್ತು ತರಬೇತಿ

ರಾಜ್ಯದ ಎಲ್ಲಾ ಡಯಟ್ ಪ್ರಾಂಶುಪಾಲರುಗಳಿಗೆ ಮಾಹಿತಿ ಹಾಗೂ ನಿಮ್ಮ ವ್ಯಾಪ್ತಿಯಲ್ಲಿನ ಎಲ್ಲಾ ಅಧಿಕೃತ ಪೂರ್ವ ಪ್ರಾಥಮಿಕ ಶಿಕ್ಷಕರ ತರಬೇತಿ ಸಂಸ್ಥೆಗಳಿಗೆ ಶೈಕ್ಷಣಿಕ ವೇಳಾಪಟ್ಟಿಯನ್ನು ಕಳುಹಿಸುವುದು.

ಪ್ರತಿಯನ್ನು,

1. ನಿರ್ದೇಶಕರು (ಇತರೆ ಪರೀಕ್ಷೆಗಳು) ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 6ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-3 ರವರ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
2. ಕಛೇರಿ ಪ್ರತಿ.

e:\p4comp47\y10-11\mis\10 ppt timetable.doc